ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 2, Sep-Oct 2020, 125-134
©*IIMRD*, Mysuru

IIMRD JOURNALS
www.iimrd.com

# ಸಂವಿಧಾನದ ಆಶಯಗಳು ಮತ್ತು ಮಹಿಳಾ ಅಭಿವೃದ್ಧಿ ಯೋಜನೆಗಳು

**ಪುಷ್ಪಾಂಜಲಿ. ಎಲ್. ಹಾವೇರಿ**[1]

**ಪೀಠಿಕೆ**

1949ರ ನವೆಂಬರ 25ರಂದು ಸಂವಿಧಾನ ರಚನಾ ಸಭೆಯನ್ನು ಉದ್ದೇಶಿಸಿ ಡಾ.ಬಿ.ಆರ್. ಅಂಬೇಡ್ಕರ್‌ರವರು ಆಡಿದ ಮಾತುಗಳು ಸದಾ ಉಲ್ಲೇಖನಿಯ ಸಂವಿಧಾನ ಎಷ್ಟೆ ಒಳ್ಳೆಯದಾಗಿರಬಹುದು. ಆದರೆ ಕೆಟ್ಟವರಿಗೆ ಕೆಲಸ ಮಾಡಲು ಬಿಟ್ಟರೆ ಕೆಟ್ಟ ಫಲಿತಾಂಶವೆ ಸಿಗುತ್ತದೆ. ಈ ಹಿನ್ನಲೆಯಲ್ಲಿ ಸಂವಿಧಾನವು ಎಷ್ಟೆ ಕೆಟ್ಟದಾಗಿರಬಹುದು ಒಳ್ಳೆಯ ವ್ಯಕ್ತಿಗಳಿಗೆ ಇದನ್ನು ಪಾಲಿಸಲು ಬಿಟ್ಟರೆ ಫಲಿತಾಂಶವು ಉತ್ತಮವೆ ಆಗಿರುತ್ತದೆ. ಸಂವಿಧಾನದ ಕಾರ್ಯ ನಿರ್ವಹಣೆ ಅದರ ಗುಣಲಕ್ಷಣದ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿರುವುದಿಲ್ಲ. ಯಾವುದೇ ದೇಶದ ರಾಜ್ಯಾಂಗದ ಕಾರ್ಯನಿರ್ವಹಣೆಯ ಮೇಲೆ ಪ್ರಭಾವ ಬೀರುವ ಅಂಶಗಳೆಂದರೆ ಆ ದೇಶದ ಪ್ರಜೆಗಳು ಮತ್ತು ಅವರ ಆಶಯಗಳನ್ನು ಈಡೇರಿಸುವುದಕ್ಕೆ ತಮ್ಮ ಸಾಧನೆಗಾಗಿ ಆಯ್ಕೆ ಮಾಡಿಕೊಂಡ ರಾಜಕೀಯ ಪಕ್ಷಗಳು ಎನ್ನಬಹುದು. ಹಾಗಾಗಿ ಪ್ರಜಾಪ್ರಭುತ್ವವು ಯಾವುದೇ ಜಾತಿ, ಧರ್ಮ, ಲಿಂಗ, ವರ್ಣ ಇತ್ಯಾದಿಗಳ ಮೇಲೆ ತಾರತಮ್ಯ ಮಾಡುವಂತಿಲ್ಲವೆಂದು ಸಂವಿಧಾನವು ಪ್ರತಿಪಾದಿಸಿದೆ. ಈ ನಿಟ್ಟಿನಲ್ಲಿ ಸಂವಿಧಾನದ ಆಶಯಗಳನ್ನು ವಿವಿಧ ಅಭಿವೃದ್ಧಿ ಯೋಜನೆಗಳ ಮುಖಾಂತರ ಈಡೇರಿಸಲು ಪ್ರಯತ್ನಿಸಿರುವುದನ್ನು ಈ ಲೇಖನದಲ್ಲಿ ಪ್ರಸ್ತುತ ಪಡಿಸಲಾಗಿದೆ. ಆದರೆ ಇಂದು ಹೋರಾಟಗಳ ಮುಖಾಂತರವೇ ಮಹಿಳಾ ಪರ ಕಾನೂನುಗಳು, ಕಾರ್ಯಕ್ರಮಗಳು ಮತ್ತು ಯೋಜನೆಗಳು ಬಂದಿರುವುದು. ಹಾಗಾಗಿ ಮಹಿಳಾ ಪರ ಹೋರಾಟಗಳು ಅಭಿವೃದ್ಧಿಯ ಚಿಂತನೆಯಿಂದ ಮುಂದುವರೆಯಬೇಕಾಗಿದೆ. ಆದರೆ ಜಾಗತೀಕರಣದ ನೆರಳಿನಲ್ಲಿ ಹೋರಾಟಗಳು ಕೂಡಾ ಮಾಯವಾಗುತ್ತಿವೆ. ಬದಲಾದ ಸನ್ನಿವೇಶದಲ್ಲಿ ಹೊಸ ರೀತಿಯ ಹೋರಾಟವನ್ನು ರೂಪಿಸಬೇಕಾದ ಅನಿವಾರ್ಯತೆ ಇದೆ. ಮುಂದುವರೆದು ಮಹಿಳೆಯರ ಪರವಾಗಿನ ಕಾನೂನು ಹೋರಾಟಗಳು ಮತ್ತು ಮಹಿಳಾ ಅಭಿವೃದ್ಧಿ ಯೋಜನೆಗಳು ದೂರದೃಷ್ಟಿಕೋನವನ್ನಿಟ್ಟುಕೊಂಡು ರೂಪಗೊಳ್ಳಬೇಕಾಗಿದೆ. ಆ ಹಿನ್ನಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂವಿಧಾನದ ಆಶಯಗಳನ್ನು ವಿವಿಧ ಅಭಿವೃದ್ಧಿ ಯೋಜನೆಗಳ ಮುಖಾಂತರ ಈಡೇರಿಸುವ ಪ್ರಯತ್ನವನ್ನು ಮಾಡುತ್ತಿವೆ ಎಂದು ಹೇಳಿದರೆ ಬಹುಶಃ ಅತೀಶಯೋಕ್ತಿಯಾಗಲಾರದು.

**ಸಂವಿಧಾನದ ಆಶಯಗಳು ಮತ್ತು ಮಹಿಳಾ ಅಭಿವೃದ್ಧಿ ಯೋಜನೆಗಳು**

ಮಹಿಳೆಯರ ಅಭಿವೃದ್ಧಿಗೆ ಅವರ ದಿನನಿತ್ಯದ ಸಮಸ್ಯೆಗಳನ್ನು ಪರಿಹರಿಸುವುದರೊಂದಿಗೆ ಅವರು ಬದುಕುವುದನ್ನು ಪ್ರಭಾವಿಸುವ ಸಾಮಾಜಿಕ, ರಾಜಕೀಯ ಸಂಬಂಧಗಳನ್ನು ಸುಧಾರಿಸುವ ಕೆಲಸವೂ

[1] *ಸಂಶೋಧನಾ ವಿದ್ಯಾರ್ಥಿನಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.*

ನಡೆಯಬೇಕಾಗಿದೆ ಏಕೆಂದರೆ ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳಿಂದ ಸಾಧನೆಯಾಗುವ ಸಂಗತಿಯಲ್ಲ ಅಭಿವೃದ್ಧಿ ಕಾರ್ಯಕ್ರಮಗಳಿಂದ ಮಹಿಳೆಯರ ಆದಾಯ ಹೆಚ್ಚಿಸಬಹುದು. ಆದರೆ ಆದಾಯ ಹೆಚ್ಚಿದ ಕೂಡಲೇ ಮಹಿಳೆಯ ಸಾಮಾಜಿಕ ರಾಜಕೀಯ ಸ್ಥಾನಮಾನ ಅಧಿಕಾರಿಗಳು ಹೆಚ್ಚುತ್ತವೆ ಎನ್ನುವ ಖಾತರಿ ಇಲ್ಲ ಇವು ಕೂಡಾ ಸುಧಾರಿಸಬೇಕಾದರೆ ಸರಕಾರ ಹಲವು ಕಾನೂನುಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು ಈ ಕಾರಣದಿಂದಲೇ ಮಹಿಳೆಯ ಸಬಲೀಕರಣದಲ್ಲಿ ಸರಕಾರ ಮಹತ್ವದ ಪಾತ್ರವಹಿಸಬೇಕೆಂದು ಕೆಲವರು ವಾದಿಸುತ್ತಾರೆ. ಸರಕಾರ ಕಾನೂನು ರೂಪಿಸಬೇಕು ಮತ್ತು ಅವುಗಳನ್ನು ಅನುಷ್ಠಾನಗೊಳಿಸಬೇಕು ಸರಕಾರ ಕಾನೂನು ಅಥವಾ ಹಕ್ಕುಗಳನ್ನು ರೂಪಿಸಿದ ಕೂಡಲೇ ಪರಿವರ್ತನೆ ಸಾಧ್ಯವೇ ಎನ್ನುವ ಪ್ರಶ್ನೆ ಕೂಡಾ ಇದೆ ಎಂದು ಹೇಳಿದರೆ ಬಹುಶಃ ತಪ್ಪಾಗಲಾರದು.

ಈ ಹಿನ್ನಲೆಯಲ್ಲಿ ಸ್ವಾತಂತ್ರ್ಯದ ನಂತರ ಭಾರತದಲ್ಲಿ ಅನೇಕ ಸರಕಾರಗಳು ಸಂವಿಧಾನದ ಆಶಯಗಳನ್ನು ಈಡೇರಿಸಲು ಸಾರ್ವಜನಿಕ ನೀತಿಯನ್ನು ರೂಪಿಸುತ್ತಾ ಬಂದಿವೆ. ಈ ಯೋಜನೆಗಳ ಮುಖ್ಯ ಉದ್ದೇಶ ಕಲ್ಯಾಣ ರಾಜ್ಯವನ್ನು ಸ್ಥಾಪಿಸುವುದು. ಈ ಯೋಜನೆಗಳು ಪ್ರಾರಂಭದಲ್ಲಿ ಕೇವಲ ಮಹಿಳಾ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಗಮನಹರಿಸಿದವು. ನತಂರದ ಯೋಜನೆಗಳು ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸಿ ಇಂದು ಮಹಿಳಾ ಸಶಕ್ತೀಕರಣದ ಬಗ್ಗೆ ಹಾಗೂ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಯ ದೆಶೆಯಲ್ಲಿ ಈ ಕೆಳಗಿನ ಅಂಶಗಳ ಮುಖಾಂತರ ಗುರಿಯಿಟ್ಟು ಸಾಧಿಸಲು ಪ್ರಯತ್ನಿಸಿವೆ ಎಂದು ಹೇಳಲಾಗುತ್ತದೆ.

**ಮೊದಲನೇ ಪಂಚವಾರ್ಷಿಕ ಯೋಜನೆ (1951 ರಿಂದ 1956)**

ಶಿಶುಗಳು ಹಾಗೂ ತಾಯದಿಂರ ಅಧಿಕ ಮರಣ ಪ್ರಮಾಣಕ್ಕೆ ಅಪೌಷ್ಟಿಕತೆಯೇ ಮುಖ್ಯ ಕಾರಣವೆಂದು ಗುರುತಿಸಿತು. ಅದಕ್ಕಾಗಿ ಶಾಲೆಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಲಾಯಿತು. ತಾಯಿ ಮತ್ತು ಮಕ್ಕಳ ಆರೋಗ್ಯ ಕೇಂದ್ರ ಸ್ಥಾಪನೆಗೆ ಕ್ರಮ ತೆಗೆದುಕೊಳ್ಳಲಾಯಿತು. ಕುಟುಂಬ ಯೋಜನೆ ಒತ್ತು ನೀಡಲಾಯಿತು.

**ಎರಡನೇ ಪಂಚವಾರ್ಷಿಕ ಯೋಜನೆ (1956 ರಿಂದ 1961)**

ಈ ಯೋಜನೆಯಲ್ಲಿ ಸಮಾಜ ಕಲ್ಯಾಣ ಕಾರ್ಯಕ್ರಮಗಳಲ್ಲಿ ಮಹಿಳೆಯರ ಬಗ್ಗೆ ಯಾವುದೇ ನಿರ್ದಿಷ್ಟ ಕಾರ್ಯಕ್ರಮವಿರಲಿಲ್ಲ. ಕೇಂದ್ರ ಸಮಜ ಕಲ್ಯಾಣ ಮಂಡಳಿಯ ಯೋಜನೆ ಕಾರ್ಯಕ್ರಮಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಯನ್ನು ಸೇರಿಸಲಾಗಿತ್ತು. ಕುಟುಂಬ ಯೋಜನೆ ಹೆಚ್ಚಿನ ಗಮನ ನೀಡಲಾಯಿತು.

**ಮೂರನೇ ಪಂಚವಾರ್ಷಿಕ ಯೋಜನೆ (1961 ರಿಂದ 1966)**

ಬಾಲಕಿಯರ ಶಿಕ್ಷಣ ಹಾಗೂ ತಾಯಿ ಮಗುವಿನ ಆರೋಗ್ಯಕ್ಕೆ ಹೆಚ್ಚಿನ ಗಮನವನ್ನೂ ಹಾಗೂ ಗ್ರಾಮೀಣ ಪ್ರದೇಶದಲ್ಲಿ ವಯಸ್ಕ ಮಹಿಳೆಯರ ಶಿಕ್ಷಣಕ್ಕೆ ಮಹತ್ವವನ್ನೂ ನೀಡಲಾಯಿತು. ಆರೋಗ್ಯ ಮತ್ತು

ಶಿಕ್ಷಣದ ವಿಸ್ತರಣೆಗೆ ಅಗತ್ಯವಾದ ಉಪಾಧ್ಯಾಯರ ತರಬೇತಿ, ನರ್ಸ್‌ಗಳ ಆಯ್ಕೆ, ಎ.ಎನ್.ಎಮ್.(ಆಕ್ಸಿಲರಿ ನರ್ಸ ಮಿಡ್‌ವೈಫ್)ಗಳ ನೇಮಕ ಮುಂತಾದವುಗಳ ಬಗ್ಗೆ ಕ್ರಮ ಕೈಗೊಳ್ಳಲಾಯಿತು.

**ನಾಲ್ಕನೆ ಪಂಚವಾರ್ಷಿಕ ಯೋಜನೆ (1969 ರಿಂದ 1974)**

ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಮಹತ್ವವನ್ನು ನೀಡಲಾಯಿತು. ಕಲ್ಯಾಣ ಕಾರ್ಯಕ್ರಮಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಗೆ ಜವಾಬ್ದಾರಿಯನ್ನು ವಹಿಸುವುದರ ಬಗ್ಗೆ ಹೆಚ್ಚು ಆಸಕ್ತಿ ತೋರಿತು. ಅನಾಥ ಹೆಣ್ಣು ಮಕ್ಕಳ ಮತ್ತು ವೇಶ್ಯಾವಾಟಿಕೆಯಿಂದ ರಕ್ಷಿಸಲ್ಪಟ್ಟ ಮಹಿಳೆಯರ ಪುನರ್ವಸತಿ ಹಾಕುವ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಯಿತು. ಕುಟುಂಬ ಯೋಜನೆಯ ಮೇಲಿನ ಹಣಕಾಸು ವೆಚ್ಚ ಅಧಿಕಗೊಳಿಸಲಾಯಿತು.

**ಐದನೇ ಪಂಚವಾರ್ಷಿಕ ಯೋಜನೆ (1974 ರಿಂದ 1978)**

ಈ ಯೋಜನೆಯಲ್ಲಿ ಮಹಿಳೆಯರಿಗೆ ತರಬೇತಿ ನೀಡುವ ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತು ನೀಡಲಾಯಿತು. ಗೃಹಕೈಗಾರಿಕೆ, ಗ್ರಾಮೀಣ ಕೈಗಾರಿಕೆ, ಕರಕುಶಲ ಕೆಲಸದಲ್ಲಿ ನಿರತರಾದ ಮಹಿಳೆಯರು ತಯಾರಿಸಿದ ಸರಕುಗಳ ಮಾರಾಟದ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು.

**ಆರನೇ ಪಂಚವಾರ್ಷಿಕ ಯೋಜನೆ (1980 ರಿಂದ 1985)**

ಈ ಯೋಜನೆಯಲ್ಲಿ ಮಹಿಳೆಯರನ್ನು ಕಲ್ಯಾಣ ಕಾರ್ಯಕ್ರಮಗಳ ಫಲಾನುಭವಿಗಳನ್ನಾಗಿ ಕಾಣುವ ದೃಷ್ಟಿಯಿಂದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವ ವ್ಯಕ್ತಿಗಳನ್ನಾಗಿ ಕಾಣುವುದಕ್ಕೆ ಈ ದೃಷ್ಟಿಕೋನ ಬದಲಾಯಿತು. ಮಹಿಳೆಯರ ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗದ ಕ್ಷೇತ್ರಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಯಿತು. ವಿಶೇಷವಾಗಿ ಮಹಿಳೆಯರ ಉದ್ಯೋಗ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ಕಾನೂನು ಬೆಂಬಲ ನೀಡಲಾಯಿತು.

**ಏಳನೇ ಪಂಚವಾರ್ಷಿಕ ಯೋಜನೆ (1985 ರಿಂದ 1990)**

ಪ್ರತ್ಯೇಕವಾಗಿ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಯ ಇಲಾಖೆಯನ್ನು ಸ್ಥಾಪಿಸಲಾಯಿತು. ತರಬೇತಿ, ಉದ್ಯೋಗ ಮತ್ತು ಗ್ರಾಮೀಣ ಮತ್ತು ಬಡ ಮಹಿಳೆಯರಲ್ಲಿ ಜಾಗೃತಿ ಉಂಟುಮಾಡುವ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯತು. ಹೆಣ್ಣು ಪತ್ನಿಯಾಗಿ ಮತ್ತು ತಾಯಿಯಾಗಿ ತನ್ನ ಜವಾಬ್ದಾರಿಯನ್ನು ವಹಿಸಿಕೊಳ್ಳವುದಕ್ಕೆ ಮುಂಚೆ ಅವಳ ಮಾನಸಿಕ ಹಾಗೂ ದೈಹಿಕ ಬೆಳವಣಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

**ಎಂಟನೇ ಪಂಚವಾರ್ಷಿಕ ಯೋಜನೆ (1992 ರಿಂದ 1997)**

ಮಹಿಳಾ ಸಮೃದ್ಧಿ ಮತ್ತು ಇಂದಿರಾ ಮಹಿಳಾ ಯೋಜನೆ ಎಂಬ ಎರಡು ಹೊಸ ಯೋಜನೆಗಳನ್ನು ಪ್ರಾರಂಭಿಸಲಾಯಿತು. ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿ ತರುವುದರ ಮೂಲಕ ಸ್ಥಳೀಯ ಸಂಸ್ಥೆಗಳಲ್ಲಿ 1/3ರಷ್ಟು ಚುನಾಯಿತ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಯಿತು. ಪ್ರತಿ ಮಗುವಿನ ಅಭಿವೃದ್ಧಯ ಕ್ರಿಯಾ ಯೋಜನೆ ತರಲಾಯಿತು.

**ಒಂಭತ್ತನೆ ಪಂಚವಾರ್ಷಿಕ ಯೋಜನೆ (1997 ರಿಂದ 2002)**

ಮಹಿಳಾ ಸಶಕ್ತೀಕರಣ ರಾಷ್ಟ್ರೀಯ ನೀತಿಯನ್ನು ಅನುಮೋದಿಸಲಾಯಿತು. ಮಹಿಳೆಯರ ಮನೆಯ ಒಳಗೆ ಮತ್ತು ಮನೆಯ ಹೊರಗೆ ಪುರುಷರಿಗೆ ಸಮನಾದ ನೆಲದಲ್ಲಿ ತಮ್ಮ ಹಕ್ಕುಗಳನ್ನು ಮುಕ್ತವಾಗಿ ಚಲಾಯಿಸಲು ವಾತಾವರಣವನ್ನು ಉಂಟು ಮಾಡುವುದರ ಕಡೆಗೆ ಗಮನ ನೀಡಲಾಯಿತು. ಮಹಿಳಾ ಘಟಕ ಯೋಜನೆಯನ್ನು ಅಳವಡಿಸಿಕೊಂಡು ಅದರ ಮೂಲಕ ಮಹಿಳಾ ಸಂಬಂಧ ಸೇವೆಗಳು, ಸಂಪನ್ಮೂಲಗಳು ಮತ್ತು ಮೂಲ ಸೌಕರ್ಯಗಳಲ್ಲಿ ಶೇ.30ರಷ್ಟನ್ನು ಮಹಿಳೆಯರಿಗಾಗಿ ಮೀಸಲಿಡುವ ನಿರ್ಧಾರವನ್ನು ಕೈಗೊಳ್ಳಲಾಯಿತು.

**ಹತ್ತನೇ ಪಂಚವಾರ್ಷಿಕ ಯೋಜನೆ (2002 ರಿಂದ 2007)**

ಈ ಯೋಜನೆಯಲ್ಲಿ ಮೂರು ಕ್ರಿಯಾ ತಂಡಗಳನ್ನು ರಚಿಸಿತು.

1. ಮಹಿಳಾ ಸಶಕ್ತೀಕರಣಕ್ಕಾಗಿ ಕ್ರೀಯಾ ತಂಡ 2. ಮಕ್ಕಳ ಅಭಿವೃದ್ಧಿಗಾಗಿ ಕ್ರಿಯಾ ತಂಡ ಮತ್ತು

3. ಶೋಷಿತರ ಪೌಷ್ಠಿತತೆಯ ಮಟ್ಟವನ್ನು ಸುಧಾರಿಸುವುದಕ್ಕಾಗಿ ರಚಿಸಿದ ಕ್ರಿಯಾತಂಡ. ಈ ತಂಡಗಳೆಲ್ಲವು ತಮ್ಮ ವರದಿಗಳನ್ನು ಸಲ್ಲಿಸಿ ಸಲಹೆಗಳನ್ನು ನೀಡಿತು. ಈ ವರದಿಗಳನ್ನು ಆಧರಿಸಿ ಉಪ ಗುಂಪುಗಳನ್ನು ರಚಿಸಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಸಶಕ್ತಿಗೊಳ್ಳಲು ಕ್ರಮ ಕೈಗೊಳ್ಳಲಾಯಿತು.

**ಹನ್ನೊಂದನೇ ಪಂಚವಾರ್ಷಿಕ ಯೋಜನೆ (2007 ರಿಂದ 2012)**

ಈ ಯೋಜನೆಯಲ್ಲಿ ಮಹಿಳೆಯರನ್ನು ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಶಕ್ತಿಗೊಳ್ಳಿಸಲು ಕಾರ್ಯಕ್ರಮ ಕೈಗೊಳ್ಳಲಾಯಿತು. ಕಾನೂನಿನ ಅರಿವು ಹೆಚ್ಚಿಸಿ ಈ ಕ್ಷೇತ್ರದಲ್ಲಿಯೂ ಸಹ ಮಹಿಳೆಯರನ್ನು ಸಶಕ್ತಕೊಳಿಸಲು ಕ್ರಮವಹಿಸಲಾಯಿತು. ಸರ್ಕಾರದ ಎಲ್ಲಾ ಇಲಾಖೆಗಳು ಮಹಿಳೆಯ ಅಭಿವೃದ್ಧಿಗೆ ಮಹತ್ವ ನೀಡಬೇಕೆಂದು ಸೂಚಿಸಲಾಯಿತು.

**ಹತ್ತನೇ ಪಂಚವಾರ್ಷಿಕ ಯೋಜನೆ (2012 ರಿಂದ 2017)**

ಈ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆ ಮತ್ತು ಮಕ್ಕಳ ಹಕ್ಕುಗಳ ಕುರಿತು ಹೆಚ್ಚು ಒತ್ತು ನೀಡಲಾಯಿತು. ಅಲ್ಲದೆ ಲಿಂಗ ಸಮಾನತೆಯ ಬಗ್ಗೆ ವಿಶೇಷ ಗಮನವನ್ನು ನೀಡಿ ಮಹಿಳೆಯರ ಸಬಲೀಕರಣದ ದೃಷ್ಟಿಕೋನದಿಂದ ಮಹಿಳೆಯರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಮತ್ತು ಅವರ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಈ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚು ಒತ್ತು ನೀಡಲಾಯಿತು. ಈ ದೆಶೆಯಲ್ಲಿ ದೇಶದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಂವಿಧಾನದ ಆಶಯಗಳಿಗನುಗುಣವಾಗಿ ಅನೇಕ ಮಹಿಳಾಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಸಾಂಸ್ಥಿಕ ರೂಪದಲ್ಲಿ ಮಹಿಳೆಯರಿಗೆ ಭದ್ರತೆಯನ್ನು ನೀಡಲು ಪ್ರಯತ್ನಿಸಿವೆ. ಅಂತಹವುಗಳೆಂದರೆ

**ಕೇಂದ್ರ ಮತ್ತು ರಾಜ್ಯ ಸರಕಾರದ ಮಹಿಳಾ ಅಭಿವೃದ್ಧಿ ಯೋಜನೆಗಳು**

**ಪೌಷ್ಟಿಕತೆಯ ಕಾರ್ಯಕ್ರಮ**

ಪೋಷಕಾಂಶದ ಕೊರತೆಯಿರುವ ಹದಿಹರೆಯದ ಹುಡುಗಿಯರಿಗೆ ತಿಂಗಳೊಂದಕ್ಕೆ ಆರು ಕೆ,ಜಿ ಆಹಾರ ಧಾನ್ಯಗಳನ್ನು ಉಚಿತವಾಗಿ ನೀಡಲಾಗಿದೆ.

**ಸ್ವ-ಸಿದ್ಧಿ ಯೋಜನೆ**

ಆಹಾರ ಸಂರಕ್ಷಣೆ, ಹೈನುಗಾರಿಕೆ, ವರ್ಮಿ-ಕಾಂಪೋಸ್ಟ್, ಟೈ ಅಂಡ್ ಡೈ, ಕಟ್ಟಿಂಗ್ ಅಂಡ್ ಟೈಲರಿಂಗ್, ಕಸೂತಿ, ಕೈತೋಟ, ಪೆಟ್ಟಿ ಅಂಗಡಿ ಮುಂತಾದ ಆದಾಯ ತರುವ ಕೆಲಸಗಳಲ್ಲಿ ತೊಡಗಿಸಿಕೊಂಡ ಸ್ವ ಸಹಾಯ ಗುಂಪುಗಳ ಮಹಿಳೆಯರು ಆರ್ಥಿಕ ನೆರವನ್ನು ಪಡೆಯಬಹುದು.

**ಸ್ವಾಧಾರ**

ಯಾವುದೇ ಸಾಮಾಜಿಕ ಮತ್ತು ಆರ್ಥಿಕ ಬೆಂಬಲವಿಲ್ಲದೆ ಬದುಕುತ್ತಿರುವ ಮಹಿಳೆಯರಿಗೆ ಪ್ರಾಥಮಿಕ ಅಗತ್ಯಗಳಾದ ವಸತಿ, ಆಹಾರ, ಬಟ್ಟೆ ಹಾಗೂ ಪಾಲನೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಹಾಗೂ ಪುನರ್ವ್ಯವಸ್ಥೆ ಕಲ್ಪಿಸಲು ಕಾನೂನು ಬೆಂಬಲ ಮತ್ತು ಸಹಾಯವಾಣಿಯನ್ನು ಒದಗಿಸಲಾಗಿದೆ.

**ಕಿಶೋರಿ ಶಕ್ತಿ ಯೋಜನೆ**

11 ರಿಂದ 18 ವರ್ಷ ವಯೋಮಾನದ ಹದಿದರೆಯದ ಹುಡುಗಿಯರ ಪೌಷ್ಟಿಕತೆ ಹಾಗೂ ಆರೋಗ್ಯ ಸ್ಥಿತಿಯನ್ನು ಸುಧಾರಿಸುವುದು, ಅನೌಪಚಾರಿಕ ಶಿಕ್ಷಣದ ಮೂಲಕ ಸಾಕ್ಷರತಾ ಕೌಶಲ್ಯವನ್ನು ಬೆಳೆಸುವುದು, ಸಾಮಾಜಿಕವಾಗಿ ಬೆರೆಯಲು ಮತ್ತು ಜ್ಞಾನ ವಿಕಾಸಕ್ಕಿರುವ ಆಕಾಂಕ್ಷೆಯನ್ನು ಉತ್ತೇಜಿಸುವುದು, ನಿರ್ಣಯ ಕೈಗೊಳ್ಳುವ ಸಾಮರ್ಥ್ಯವನ್ನು ಉತ್ತಮಗೊಳ್ಳಲು ನೆರವಾಗುವುದು, ತಮ್ಮ ಸಾಮಾಜಿಕ ಹಾಗೂ ಸುತ್ತಮುತ್ತಲ ವಿಷಯಗಳನ್ನು ಅರಿತುಕೊಳ್ಳಲು ಶಕ್ತರಾಗಿಸುವುದು ಈ ಯೋಜನೆಯ ಉದ್ದೇಶಗಳಾಗಿವೆ ಎಂದು ಹೇಳಬಹುದು.

**ಉಜ್ವಲ ಯೋಜನೆ**

ಲೈಂಗಿಕ ಶೋಷಣೆಗೆ ಗುರಿಯಾದವರನ್ನು ರಕ್ಷಿಸಿ ಅವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಪುನರ್ವಸತಿ ಕಲ್ಪಿಸುವುದು. ಪೂರಕ ಸೇವೆಗಳು ಮತ್ತು ದುಡಿಯುವ ಮಹಿಳೆಯರಿಗೆ ಹಾಸ್ಟಲ್‌ಗಳು, ಶಿಶುಪಾಲನ ಕೇಂದ್ರಗಳು, ಅಲ್ಪಾವಧಿ ವಸತಿಗೃಹಗಳ ಸ್ಥಾಪನೆ ಈ ಯೋಜನೆಯಲ್ಲಿ ಬರುವ ಉದ್ದೇಶಗಳು.

**ಭಾಗ್ಯಲಕ್ಷ್ಮಿ ಯೋಜನೆ**

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿದ ಹೆಣ್ಣು ಶಿಶುವನ್ನು ಪ್ರವರ್ಧಮಾನಕ್ಕೆ ತಂದು ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಅವಳ ಸ್ಥಾನಮಾನವನ್ನು ಎತ್ತರಿಸುವುದು ಈ ಯೋಜನೆಯ ಉದ್ದೇಶ. ಇಂತಹ ಬಡ ಕುಟುಂಬದ ಮೊದಲನೆ ಹೆಣ್ಣು ಶಿಶು ಫಲಾನುಭವಿಯ ಹೆಸರಿನಲ್ಲಿ ರೂ.19,300 ಹಾಗೂ ಎರಡನೇ ಹೆಣ್ಣು ಶಿಶು ಫಲನಾಭವಿಯ ಹೆಸರಿನಲ್ಲಿ 18,300 ಗಳನ್ನು ಠೇವಣಿ ಇಡಲಾಗುತ್ತದೆ. ಈ ಮಕ್ಕಳು 18 ವರ್ಷ ಪೂರ್ಣವಾದೊಡನೆ ಪ್ರತಿ ಮಗುವಿಗೆ ಒಂದು ಲಕ್ಷ ರೂಪಾಯಿಗಳಷ್ಟು ನಗದು ಈ ಯೋಜನೆಯಲ್ಲಿ ಲಭಿಸುತ್ತದೆ.

**ಸ್ವಾಧಾರಗೃಹ**

ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಯೋಜನೆ 2016-17ನೇ ಸಾಲಿನಿಂದ ಕೇಂದ್ರ ಸರ್ಕಾರವು ಸ್ವಾಧಾರ ಮತ್ತು ಅಲ್ಪಾವಧಿ ವಸತಿಗೃಹ ವಿಲೀನಗೊಳಿಸಿ ಸ್ವಾಧಾರಗೃಹ ಯೋಜನೆ ಅನುಷ್ಠಾನಕ್ಕೆ ತಂದಿರುತ್ತಾರೆ. ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಆಶ್ರಯ, ಆಹಾರ, ಬಟ್ಟೆ,

ತರಬೇತಿ ಹಾಗೂ ಶಿಕ್ಷಣ, ವಸತಿ, ವೃತ್ತಿಪರ ತರಬೇತಿ, ಸಮಾಲೋಚನೆ, ವೈದ್ಯಕೀಯ ನೆರವು, ಕುಟುಂಬಕ್ಕೆ ಪುನರ್‌ಮಿಲನ ಮತ್ತು ಕಾನೂನಿನ ನೆರವನ್ನು ನೀಡುವುದರ ಮೂಲಕ ಮಹಿಳೆಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ನೊಂದಣಿಯಾಗಿ ಮೂರು ವರ್ಷವಾಗಿರುವ ಆರ್ಥಿಕವಾಗಿ ಸದೃಢವಾದ ಎಲ್ಲಾ ಮೂಲಭೂತ ಅನುಕೂಲತೆಗಳನ್ನು ಹೊಂದಿದ, ಮಹಿಳಾ ಕಲ್ಯಾಣ ಕ್ಷೇತ್ರದಲ್ಲಿ ಅನುಭವವಿರುವ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೇಂದ್ರಗಳಲ್ಲಿ, ಸಲಹಾ ಕೇಂದ್ರ, ತರಬೇತಿ ಕೇಂದ್ರ ಹಾಗೂ ವೈದ್ಯಕೀಯ ಕೇಂದ್ರಗಳನ್ನು ನಡೆಸಲು ಅವಕಾಶವಿದೆ. ರಾಜ್ಯದಲ್ಲಿ ಪ್ರಸ್ತುತ 48 ಸ್ವಾಧಾರ ಗೃಹ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಬಹುದು.

**ರಾಜ್ಯ ಸರ್ಕಾರದ ಉದ್ಯೋಗಸ್ಥ ಮಹಿಳೆಯರ ವಸತಿಗೃಹ ನಿರ್ಮಾಣ ಯೋಜನೆ**

ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮಹಿಳೆಯರಿಗೆ ಸುರಕ್ಷಿತ ಹಾಗೂ ಯೋಗ್ಯ ವಸತಿ ಸೌಕರ್ಯವನ್ನು ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ 4000 ಚದುರಡಿ ನಿವೇಶನದಲ್ಲಿ ಉದ್ಯೋಗಸ್ಥ ಮಹಿಳಾ ವಸತಿಗೃಹ ನಿರ್ಮಿಸಲು ನೋಂದಾಯಿತ ಖಾಸಗಿ ಸಂಸ್ಥೆ/ ಸ್ವಯಂ ಸೇವಾ ಸಂಸ್ಥೆಗಳಿಗೆ ರೂ.25.00 ಲಕ್ಷಗಳ ಮಿತಿಗೊಳಪಟ್ಟಂತೆ ರಾಜ್ಯ ಸರ್ಕಾರದಿಂದ ನೆರವು ಒದಗಿಸಲಾಗುವುದು.

**ಸ್ಥೈರ್ಯ ಯೋಜನೆ**

ಸ್ಥೈರ್ಯ ನಿಧಿಯಿಂದ ಅತ್ಯಾಚಾರ ಮತ್ತು ದೌರ್ಜನ್ಯಕ್ಕೊಳಗಾದ ಮಹಿಳೆಯು ಪ್ರಥಮ ವರ್ತಮಾನ ವರದಿ ದಾಖಲಾದ 24 ಗಂಟೆಗಳೊಳಗಾಗಿ ತುರ್ತು ಪರಿಹಾರಕ್ಕಾಗಿ ರೂ.25000/–ಗಳನ್ನು ನೀಡಲಾಗುವುದು. ಹೆಚ್ಚಿನ ವೈದ್ಯಕೀಯ ಚಿಕಿತ್ಸೆ ಅಗತ್ಯವಿದ್ದಲ್ಲಿ ಪ್ರತಿ ಪ್ರಕರಣಕ್ಕೆ ಗರಿಷ್ಠ ರೂ.2.00ಲಕ್ಷ ಪರಿಹಾರ ನೀಡಲು ಅವಕಾಶವನ್ನು ಕಲ್ಪಿಸಲಾಗಿದೆ. ಅತ್ಯಾಚಾರ ದೌರ್ಜನ್ಯದಿಂದ ಅಥವಾ ಆಸಿಡ್‌ದಾಳಿಗೊಳಗಾಗಿ ಮೃತಪಟ್ಟಲ್ಲಿ ಅಂತಹ ಮಹಿಳೆಯ ಕುಟುಂಬಕ್ಕೆ ರೂ.1.00 ಲಕ್ಷ ಮರಣ ಪರಿಹಾರವನ್ನು ಈ ಯೋಜನೆಯ ಅಡಿಯಲ್ಲಿ ನೀಡಲಾಗುವುದು.

**“ಗೆಳತಿ” ವಿಶೇಷ ಚಿಕಿತ್ಸಾ ಘಟಕ ಯೋಜನೆ**

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ನೆರವು ಒದಗಿಸುವುದು, ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ಅಗತ್ಯ ನೆರವು ಒದಗಿಸುವುದು. ವಿಶೇಷ ಚಿಕಿತ್ಸಾ ಘಟಕಗಳನ್ನು ಎಲ್ಲಾ ಜಿಲ್ಲೆ ಮತ್ತು 145 ತಾಲ್ಲೂಕು ಆಸ್ಪತ್ರೆಗಳಲ್ಲಿ ಪ್ರಾರಂಭಿಸಲಾಗಿರುತ್ತದೆ. ಬೆಂಗಳೂರು ಮಹಾನಗರದಲ್ಲಿ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ವಾಣಿ ವಿಲಾಸ್ ಜಯನಗರ ಸಾರ್ವಜನಿಕ ಆಸ್ಪತ್ರೆ ಹಾಗೂ ಕೆ.ಆರ್ ಪುರಂ ಆಸ್ಪತ್ರೆಗಳಲ್ಲಿ ಪ್ರಾರಂಭಿಸಲಾಗಿರುತ್ತದೆ.

ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ, ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೋಲಿಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸಲಾಗುವುದು. ಈ ಘಟಕಗಳು ದಿನದ 24 ಗಂಟೆಗಳೂ ಕಾರ್ಯ ನಿರ್ವಹಿಸುತ್ತಿದ್ದು, ಕಾನೂನು ಉಚಿತ ಮಹಿಳಾ ಸಹಾಯವಾಣಿ 181 ಲಭ್ಯವಿರುತ್ತದೆ. ಈ ಘಟಕಗಳಲ್ಲಿ ವೈದ್ಯಾಧಿಕಾರಿಗಳು, ಕಾನೂನು

ಸಲಹೆಗಾರರು, ಪೋಲಿಸ್ ಅಧಿಕಾರಿಗಳು, ಆಪ್ತ ಸಮಾಲೋಚಕರು ಹಾಗೂ ಸಮಾಜ ಸೇವಾ ಕಾರ್ಯಕರ್ತರು ಕಾರ್ಯನಿರ್ವಹಿಸುತ್ತಿದ್ದು, ನೊಂದ ಮಹಿಳೆಯರಿಗೆ ಅಗತ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ.

**ಮಹಿಳಾ ಸ್ವೀಕಾರ ಕೇಂದ್ರಗಳು**

ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ 18 ವರ್ಷ ಮೇಲ್ಪಟ್ಟ ಮಹಿಳೆಯರು ಸ್ವಿಚ್ಛೆಯಿಂದ, ಸ್ವೈಮ ಸೇವಾ ಸಂಸ್ಥೆಗಳ ಮುಖಾಂತರ, ಯಾವುದೇ ವ್ಯಕ್ತಿಗಳ ಮುಖಾಂತರ ಹಾಗೂ ಅನೈತಿಕ ವ್ಯವಹಾರಗಳ (ತಡೆಗಟ್ಟುವ) ಅಧಿನಿಯಮ 1956ರ ಅಡಿಯಲ್ಲಿ ನ್ಯಾಯಾಲಯದಿಂದ ಪ್ರಕರಣವನ್ನು ದಾಖಲಿಸಿ ಕಳುಹಿಸಲ್ಪಟ್ಟ ಮಹಿಳೆಯರನ್ನು ದಾಖಲಿಸಿಕೊಳ್ಳಲಾಗುವುದು.

ಸಂಸ್ಥೆಯಲ್ಲಿ ನಿವಾಸಿಯರಿಗೆ ಪಾಲನೆ, ಪೋಷಣೆ, ಊಟ, ವಸತಿ, ಬಟ್ಟೆ, ವೈದ್ಯಕೀಯ ಸೌಲಭ್ಯ, ರಕ್ಷಣೆ ಮತ್ತು ತರಬೇತಿಯನ್ನು ನೀಡಲಾಗುವುದು. ನ್ಯಾಯಾಲಯದ ಆದೇಶದ ಮೇರೆಗೆ ನಿವಾಸಿಯರನ್ನು ಬಿಡುಗಡೆ ಮಾಡಲಾಗುತ್ತದೆ. ನಿವಾಸಿಯರನ್ನು ಪೋಷಕರು ವಶಕ್ಕೆ ಪಡೆಯಲು ಇಚ್ಛಿಸಿದಲ್ಲಿ ನಿಯಮಾನುಸಾರ ಬಿಡುಗಡೆ ಮಾಡಲಾಗುತ್ತದೆ. ದೀರ್ಘಕಾಲ ಪುನರ್ವಸತಿ ಅಗತ್ಯವಿರುವ ಮಹಿಳೆಯರನ್ನು ರಾಜ್ಯ ಮಹಿಳಾ ನಿಲಯಗಳಿಗೆ ವರ್ಗಾಯಿಸಲಾಗುವುದು. ರಾಜ್ಯದಲ್ಲಿ ಬೆಂಗಳೂರು, ತುಮಕೂರು ಹಾಗೂ ಕಾರವಾರದಲ್ಲಿ ಒಟ್ಟು 3 ಸ್ವೀಕಾರ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**ಮಹಿಳಾ ನಿಲಯಗಳು**

ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ 18 ವರ್ಷ ಮೇಲ್ಪಟ್ಟ ಮಹಿಳೆಯರನ್ನು ಹಾಗೂ ಅನೈತಿಕ ವ್ಯವಹಾರಗಳ (ತಡೆಗಟ್ಟುವ) ಅಧಿನಿಯಮ 1956ರ ಅಡಿಯಲ್ಲಿ ನ್ಯಾಯಾಲಯದಿಂದ ದಾಖಲಾದ ಪ್ರಕರಣಗಳು ಹಾಗೂ ಬಾಲಕಿಯರ ಬಾಲಮಂದಿರದಲ್ಲಿ 18 ವರ್ಷ ತುಂಬಿದ ನಿವಾಸಿಯರನ್ನು ದೀರ್ಘಾವಧಿ ಪುನರ್ವಸತಿಗಾಗಿ ದಾಖಲಿಸಿಕೊಳ್ಳಲಾಗುವುದು. ಸಂಸ್ಥೆಯಲ್ಲಿ ನಿವಾಸಿಯರಿಗೆ ಪಾಲನೆ, ಪೋಷಣೆ, ಊಟ, ವಸತಿ, ಬಟ್ಟೆ, ವೈದ್ಯಕೀಯ ಸೌಲಭ್ಯ, ರಕ್ಷಣೆ ಮತ್ತು ತರಬೇತಿಯನ್ನು ನೀಡಲಾಗುವುದು ಧೀರ್ಘಾವಧಿ ಪುನರ್ವಸತಿ ಕೇಂದ್ರ ನಿವಾಸಿಯರನ್ನು ಪೋಷಕರು ವಶಕ್ಕೆ ಪಡೆಯಲು ಇಚ್ಛಿಸಿದಲ್ಲಿ ನಿಯಮಾನುಸಾರ ಬಿಡುಗಡೆ ಮಾಡಲಾಗುತ್ತದೆ. ಸಂಸ್ಥೆಯಲ್ಲಿರುವ ನಿವಾಸಿಗಳಿಗೆ ಅರ್ಹ ವಿವಾಹ ಪ್ರಸ್ತಾಪವಿದ್ದ ಸಂದರ್ಭದಲ್ಲಿ ವಿವಾಹವನ್ನು ಸಹ ನೆರವೇರಿಸಲಾಗುತ್ತಿದೆ. ಇದಕ್ಕಾಗಿ ಒಟ್ಟು ರೂ.20,000ಗಳನ್ನು ನೀಡಲಾಗುತ್ತಿದ್ದು, ರೂ.5,000ಗಳನ್ನು ಮದುವೆ ಖರ್ಚು ಹಾಗೂ ಉಳಿದ ರೂ.15,000ಗಳನ್ನು ನಿವಾಸಿಯ ಹೆಸರಿನಲ್ಲಿ ಠೇವಣಿ ಇಡಲಾಗುವುದು. ರಾಜ್ಯದಲ್ಲಿ ಪ್ರಸ್ತುತ 8 ರಾಜ್ಯ ಮಹಿಳಾ ನಿಲಯಗಳು ಶಿವಮೊಗ್ಗ, ಬೆಂಗಳೂರು, ಬಳ್ಳಾರಿ, ದಾವಣಗೆರೆ, ಗುಲ್ಬರ್ಗಾ, ಹುಬ್ಬಳ್ಳಿ, ಮೈಸೂರು ಮತ್ತು ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಹೀಗೆ ಹಲವಾರು ರೀತಿಯ ಮಹಿಳಾ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅವುಗಳಲ್ಲಿ ಇತ್ತೀಚಿನ ಯೋಜನೆಗಳಾದ ಉದ್ಯೋಗಿನಿ ಯೋಜನೆ, ಮನಸ್ವಿನಿ ಯೋಜನೆ, ಶಾದಿಭಾಗ್ಯ ಯೋಜನೆ, ಬೇಟಿ ಬಚಾವೋ ಬೇಟಿ ಪಡಾವೋ ದಂತಹ ಅನೇಕ ಮಹಿಳಾ ಅಭಿವೃದ್ಧಿ ಯೋಜನೆಗಳು

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಹಿಳೆಯರನ್ನು ಸಬಲೀಕರಣಗೊಳಿಸಲು ಮತ್ತು ಮಹಿಳಾ ಸಶಕ್ತಿಕರಣ ಸಾಧಿಸಲು ಹಾಗೂ ಲಿಂಗ ಸಮಾನತೆಯನ್ನು ಸಾಧಿಸಿ ಮಹಿಳೆಯರ ಸಮಾಜೋ–ಆರ್ಥಿಕ ಅಭಿವೃದ್ಧಿಯನ್ನು ಸಾಂಸ್ಥಿಕ ರೂಪದಲ್ಲಿ ಸಬಲಗೊಳಿಸಲು ಪ್ರಯತ್ನಿಸುತ್ತಿವೆ ಎಂದು ಹೇಳಿದರೆ ಬಹುಶಃ ಅತಶಯೋಕ್ತಿಯಾಗಲರದು.

***ಮಹಿಳಾ ಹಕ್ಕುಗಳನ್ನು ಸಂರಕ್ಷಿಸುವ ಕಾಯ್ದೆಗಳು***

**ವಿಚ್ಛೇಧನ ಕಾಯ್ದೆ**

ಗಂಡ–ಹೆಂಡಿರಲ್ಲಿ ಒಂದಾಗಿ ಬಾಳುವ ಇಷ್ಟವಿಲ್ಲದಿದ್ದರೆ, ಭಿನ್ನಾಭಿಪ್ರಾಯಗಳಿದ್ದರೆ ಈ ವಿವಾಹ ಬಂಧನದಿಂದ ಹೊರಬರಬಹುದು. ನಿರಂತರವಾಗಿ ಎರಡು ವರ್ಷಗಳ ಕಾಲ ಪರಸ್ಪರ ಒಬ್ಬರಿಂದ ಮತ್ತೊಬ್ಬರು ದೂರವಿರುವುದು ಅಥವಾ ಗಂಡನು ಹೆಂಡತಿಯ ಮೇಲೆ ಹಿಂಸೆ, ಅನವಶ್ಯಕ ದಬ್ಬಾಳಿಕೆ ಮಾಡುವುದು, ಮುಂತಾದ ಕಾರಣಗಳಿಂದಾಗಿ, ಕಾನೂನಿನ ಪ್ರಕಾರ ವಿಚ್ಛೇಧನ ಪಡೆದುಕೊಳ್ಳಬಹುದು. ಇತ್ತೀಚೆಗೆ ಮಾಡಿದ ತಿದ್ದುಪಡಿಯನುಸಾರವಾಗಿ ಕ್ರೈಸ್ತ ಧರ್ಮ ಪದ್ದತಿಯ ಪ್ರಕಾರವೂ ವಿಚ್ಛೇದನ ಪಡೆದುಕೊಳ್ಳಬಹುದು.

**ಮಕ್ಕಳ ಪೋಷಣಾ ಕಾಯ್ದೆ**

ಮಕ್ಕಳ ಪೋಷಣೆಯ ವಿಷಯದಲ್ಲಿ ಕಾನೂನು ಏನು ಹೇಳುತ್ತದೆ ಎಂಬುದರ ಹೊರತಾಗಿ ತಂದೆ, ತಾಯಿಯರ ಪೈಕಿ ಯಾರು ಮಕ್ಕಳನ್ನು ಚೆನ್ನಾಗಿ ಪೋಷಿಸುತ್ತಾರೆ ಎಂಬುದರ ಬಗ್ಗೆ ಮಕ್ಕಳ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಅದರಂತೆಯೇ ಮಕ್ಕಳು ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಅದರಂತೆಯೇ ಮಕ್ಕಳು ಬಯಸಿದವರ ವಶಕ್ಕೆ ವಹಿಸುವಂತೆ ನ್ಯಾಯಶಾಸ್ತ್ರ ಸೂಚಿಸುತ್ತದೆ. ವಿಶೇಷ ಸಂದರ್ಭಗಳಲ್ಲಿ ತಾತ, ಅಜ್ಜಿಯರ ವಶಕ್ಕೂ ಮಕ್ಕಳನ್ನು ಒಪ್ಪಿಸಲಾಗುತ್ತದೆ.

**ಜೀವನಾಂಶ**

ಹೆಂಡತಿ ಗಂಡನಿಂದ, ಗಂಡನು ಹೆಂಡತಿಯಿಂದ, ವೃದ್ದತಾಯಿ, ತಂದೆಯರು ತಮ್ಮ ಮಕ್ಕಳಿಂದ ಅಪ್ರಾಪ್ತ ವಯಸ್ಸಿನ ಮಕ್ಕಳು ತಂದೆ–ತಾಯಿಯರಿಂದಲೂ ಕಾನೂನಿನ ಪ್ರಕಾರ ಜೀವನಾಂಶವನ್ನು ಪಡೆಯಬಹುದು.

**ವರದಕ್ಷಿಣೆ ತಡೆ ಕಾಯ್ದೆ**

ಕಾನೂನಿನ ದೃಷ್ಟಿಯಲ್ಲಿ ವರದಕ್ಷಿಣೆ ಕೊಡುವುದು ಹಾಗೂ ತೆಗೆದುಕೊಳ್ಳವುದು ಅಪರಾಧ. ನಗದು ಅಥವಾ ಒಡವೆ ವಸ್ತುಗಳನ್ನು ಕೊಟ್ಟಿದ್ದರೂ ಅದರ ಮೇಲೆ ಹೆಣ್ಣಿಗೆ ಸಂಪೂರ್ಣ ಹಕ್ಕಿರುತ್ತದೆ. ಗಂಡನ ಜೊತೆ ಬಾಳ್ವೆ ನಡೆಸಲು ಇಷ್ಟವಿಲ್ಲದವಳು ತವರಿನವರು ಕೊಟ್ಟ ಹಣ, ಒಡವೆ ವಸ್ತುಗಳನ್ನು ವಾಪಸ್ ಕೇಳಿದರೆ ಗಂಡನಾದವನು ಅದನ್ನು ಹಿಂತಿರುಗಿಸಿಲೇಬೇಕು. ಒಂದು ವೇಳೆ ಕೊಡಲು ನಿರಾಕರಿಸಿದರೆ ಕ್ರಿಮಿನಲ್ ಪ್ರಸ್ ಆಫ್ ಟ್ರಸ್ಟ್ ಕಾಯ್ದೆಯ ಪ್ರಕಾರ ಅಪರಾಧ. ಮದುವೆಯಾದ ಏಳು ವರ್ಷದೊಳಗೆ ಹೆಂಡತಿ ಬಯಸಿದರೆ ವರದಕ್ಷಿಣೆ ಮೊಕ್ಕದ್ದಮೆಯನ್ನು ಪರಿಗಣಿಸಲಾಗುತ್ತದೆ. ಗಂಡ ಮತ್ತು ಕುಟುಂಬದ ಇತರೆ ಸದಸ್ಯರ ವಿರುದ್ದ ಮೊಕದ್ದಮೆ ಹೂಡಿ ಅಪರಾಧವನ್ನು ಸಾಬೀತುಪಡಿಸಿ ಅವರನ್ನು ಶಿಕ್ಷೆಗೊಳಪಡಿಸಬಹುದು. ಮದುವೆಯಾದ ಏಳು ವರ್ಷದ ನಂತರ ವರದಕ್ಷಿಣೆ ಮೊಕದ್ದಮೆಯನ್ನು

ಹೂಡಲಾಗುವುದಿಲ್ಲ. ಹೆಂಡತಿಯನ್ನು ಮನಸಿಕವಾಗಿ ದೈಹಿಕವಾಗಿ ಹಿಂಸಿಸುವ ಗಂಡನ ಮೇಲೆ ಮೊಕದ್ದಮೆ ಹೂಡಬಹುದು ಅದು ಪ್ರೊವ್ ಆಗುವಂತಿರಬೇಕು.

**ಆಸ್ತಿಯ ಮೇಲಿನ ಹಕ್ಕು**

ವಿಚ್ಛೇದನ ಪಡೆದ ಮಹಿಳೆಗೆ ಆಸ್ತಿ ಹಕ್ಕುದಾರಿಕೆಯನ್ನು ಆಯಾ ಧರ್ಮಗಳಿಗನುಸಾರವಾಗಿಯೇ ವಿಂಡಿಸಲಾಗುತ್ತದೆ. ಕ್ರೈಸ್ತರಿಗೆ ಭಾರತೀಯ ಆಸ್ತಿ ಕಾಯ್ದೆ ಪ್ರಕಾರ, ಹಿಂದುಗಳಿಗೆ ಹಿಂದು ಧರ್ಮ ಹಕ್ಕು ಕಾಯ್ದೆ ಪ್ರಕಾರ ವಿಂಗಡಿಸಲಾಗುತ್ತದೆ. ವಿಶೇಷ ವಿವಾಹ ಕಾಯ್ದೆಯನುಸಾರ ಮದುವೆ ಮಾಡಿಕೊಂಡವರಿಗೆ ಭಾರತೀಯ ಹಕ್ಕುದಾರಿಕೆ ಕಾಯ್ದೆ ಅನ್ವಯಿಸುತ್ತದೆ. ಕ್ರೈಸ್ತ ಪಾಲಿನ ಹಕ್ಕಿದೆ. ಆದರೆ ಇಸ್ಲಾಂ ಧರ್ಮದ ಪ್ರಕಾರ ಹೆಂಗಸರಿಗೆ ಮೂರನೇ ಒಂದು ಪಾಲು ಮಾತ್ರ ಆಸ್ತಿ ಹಕ್ಕುದಾರೊಕೆ ಬರುತ್ತದೆ. ಉಳಿದ ಎರಡು ಪಾಲು ಗಂಡಸರಿಗೆ ಸೇರುತ್ತದೆ.

**ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ನಿಯಮ 2006**

ಸಂವಿಧಾನದಲ್ಲಿ ಖಾತ್ರಿಪಡಿಸಿರುವ ಮಹಿಳೆಯರ ಹಕ್ಕುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ರಕ್ಷಣೆ ಮಾಡುವುದು ಈ ಕಾಯ್ದೆಯ ಉದ್ದೇಶ. ಕುಟುಂಬದೊಳಗಾಗುವ ಯಾವುದೇ ಬಗೆಯ ಹಿಂಸೆಗಳೊಗಾದ ಮಹಿಳೆಯರಿಗೆ ಸಂಬಂಧಿಸಿದಂತೆ ಹೆಚ್ಚು ಪರಿಣಾಮಕಾರಿಯಾದ ಸಂರಕ್ಷಣೆ ಒದಗಿಸುವುದಕ್ಕಾಗಿ ಭಾರತ ಸರ್ಕಾರವು ಕೌಟುಂಬಿಕ ಹಿಂಸೆಯಿಂದ ಮಹಿಳೆಯರನ್ನು ಸಂರಕ್ಷಣಾ ಅಧಿನಿಯಮ 2005 ಹಾಗೂ ನಿಯಮ 2006ನ್ನು ಅಕ್ಟೋಬರ್ 26 ರಿಂದ ಜಾರಿಗೆ ಬಂದಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಈ ಕಾಯ್ದೆಯನ್ನು ಜೂನ್ 2007 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ 47 ಪ್ರತ್ಯೇಕ ಸಂರಕ್ಷಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ರಕ್ಷಿಸಲು ಸಂರಕ್ಷಣಾಧಿಕಾರಿಗಳೆಂದು ನೇಮಿಸಲಾಗಿದೆ. ಕಾಯ್ದೆಯ ಸಮರ್ಪಕ ಅನುಷ್ಠಾನಕ್ಕಾಗಿ ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಸಮನ್ವಯ ಸಮಿತಿಗಳನ್ನು ರಚಿಸಲಾಗಿದೆ.

ರಾಜ್ಯದ ಎಲ್ಲಾ ತಾಲ್ಲೂಕುಗಳ ಶಿಶುಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದಲ್ಲಿ ಉಚಿತ ಕಾನೂನು ಸಲಹಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಆ ಕೇಂದ್ರಗಳಲ್ಲಿ ನುರಿತ ನ್ಯಾಯವಾದಿಗಳು ಪ್ರತಿ ಬುಧವಾರ ಮತ್ತು ಶನಿವಾರ ಉಚಿತ ಕಾನೂನು ಸಲಹೆ ನೀಡುತ್ತಿದ್ದಾರೆ. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ರಕ್ಷಣೆ, ಅಲ್ಪಾವದಿ ಆಶ್ರಯ ಮತ್ತು ಸಲಹೆ ಹಾಗೂ ಮಾರ್ಗದರ್ಶನ ಒದಗಿಸಲು ರಾಜ್ಯದಲ್ಲಿ ಸ್ವಾಧಾರ ಕೇಂದ್ರಗಳನ್ನು ಅಲ್ಪಾವಧಿ ವಸತಿಗೃಹಗಳು, ಸಾಂತ್ವನ ಕೇಂದ್ರಗಳನ್ನು ರಕ್ಷಾಣಾ ಗೃಹಗಳೆಂದು ಅಧಿಸೂಚನೆ ಹೊರಡಿಸಲಾಗಿದ್ದು, ನೊಂದ ಮಹಿಳೆಯರು ಇಲ್ಲಿ ಸಮಾಲೋಚನೆ ಹಾಗೂ ರಕ್ಷಣೆ, ಅಲ್ಪಾವಧಿ ಆಶ್ರಯ ಪಡೆಯಬಹುದಾಗಿದೆ. ಇದಲ್ಲದೆ 116 ಸ್ವಯಂಸೇವಾ ಸಂಸ್ಥೆಗಳನ್ನು ನೊಂದ ಮಹಿಳೆಯರಿಗೆ ಕಾನೂನು, ವೈದ್ಯಕೀಯ ಹಾಗೂ ಇತರೆ ನೆರವು ನೀಡಲು ಸೇವಾ ಸಂಸ್ಥೆಗಳು ಎಂದು ಅಧಿಸೂಚನೆ ಹೊರಡಿಸಲಾಗಿದೆ.

ಒಬ್ಬ ಹೆಣ್ಣು ತಂದೆ ತಾಯಿಯರಿಗೆ ಮಗಳಾಗಿ, ಗಂಡನಿಗೆ ಹೆಂಡತಿಯಾಗಿ, ಎರಡೂ ಕಡೆಯಿಂದ ಆಸ್ತಿಪಾಲನ್ನು ಪಡೆಯುವ ಹಕ್ಕಿದೆ ಎಂದು ಕಾನೂನು ಹೇಳುತ್ತದೆ. ಇಸ್ಲಾಂ ಧರ್ಮದ ಕಾನೂನಿನ ಪ್ರಕಾರ

ಮದುವೆಯಾದವರು ಅವರು ಮತ್ತೆ ಇತರೆ ಹೆಣ್ಣುಗಳನ್ನು ಮದುವೆಯಾಗದಂತೆ ತಡೆಯಬಹುದು ರಿಜಿಸ್ಟರ್ ಮದುವೆಯದ ನಂತರ ಧರ್ಮದ ಕಾನೂನು ಇದಕ್ಕೆ ಅನ್ವಯವಾಗುವುದಿಲ್ಲ.

**ಉಪಸಂಹಾರ**

ಇಂದು ಅಭಿವೃದ್ಧಿಯನ್ನು ಸಾಮಾಜಿಕ ಅಭಿವೃದ್ಧಿ ಎನ್ನುವ ಅರ್ಥದಲ್ಲಿ ಹೆಚ್ಚು ಬಳಸುತ್ತಾರೆ ಸಾಮಾಜಿಕ ಅಭಿವೃದ್ಧಿ ಎನ್ನುವಾಗ ಬಹುತೇಕ ಸಂದರ್ಭಗಳಲ್ಲಿ ಇದು ಆರ್ಥಿಕ ಪರಿವರ್ತನೆಗಳಿಗೆ ಸೀಮಿತಗೊಂಡಂತೆ ಬಳಕೆಯಾಗುತ್ತಿದೆ ಕೃಷಿ ಕೈಗಾರಿಕೆ ಸೇವಾವಲಯಗಳಲ್ಲಿ ವಿಜ್ಞಾನ ತಂತ್ರಜ್ಞಾನಗಳನ್ನು ಬಳಸಿ ಉತ್ಪಾದನೆ ಹೆಚ್ಚಿಸುವುದು ಸಾರಿಗೆ ಸಂಪರ್ಕ ವಸತಿ ಶಿಕ್ಷಣ ಆರೋಗ್ಯ ಇತ್ಯಾದಿ ಮೂಲಸೌಕರ್ಯಗಳನ್ನು ಪೂರೈಸುವುದು ಎನ್ನು ಅರ್ಥದಲ್ಲಿ ಅಭಿವೃದ್ಧಿಯನ್ನು ನೋಡಲಾಗುತ್ತಿದೆ. ಅಭಿವೃದ್ಧಿ ಕಲ್ಪನೆಯಲ್ಲಿ ಮುಖ್ಯವಾದ ಅಂಶಗಳು ಕೃಷಿ ಕೈಗಾರಿಕೆಗಳನ್ನು ಸೇವಾಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಜನರಿಗೆ ಆಹಾರ, ಶಿಕ್ಷಣ, ಆರೋಗ್ಯ, ವಸತಿ, ಸಾರಿಗೆ ಸಂಪರ್ಕ ಇತ್ಯಾದಿ ಮೂಲಸೌರ್ಕಯಗಳನ್ನು ಒದಗಿಸುವ ಉದ್ದೇಶದಿಂದ ಇವೆಲ್ಲವನ್ನು ಮಾಡಲಾಗುತ್ತಿದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಚಂದ್ರಪೂಜಾರಿ.ಎಂ. (2012). ಅಭಿವೃದ್ಧಿ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ಪು.ಸಂ.81–82
- ಚಂದ್ರಶೇಖರ. ಟಿ. ಆರ್. (2016). ಮಹಿಳಾ ಅದ್ಯಯನ ಪರಿಭಾಷೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು.ಸಂ.50, 77.
- ಗಾಯತ್ರಿ. ಎನ್. (2012). ಮಹಿಳಾ ಮೀಸಲಾತಿ ಮತ್ತು ಲಿಂಗ ರಾಜಕಾರಣ. ಲಡಾಯಿ ಪ್ರಕಾಶನ, ಗದಗ. ಪು.ಸಂ.19–20.
- ಹೇಮಲತಾ.ಎಚ್.ಎಮ್. (2016) ಮಹಿಳಾ ಸಶಕ್ತಿಕರಣ: ಒಂದು ಪರಿಕಲ್ಪನೆ. ಬೆಂಗಳೂರು. ಪು.ಸಂ.15, 40.
- ಕಾವ್ಯಶ್ರೀ.ಎಚ್. (2019). ಪೆಮಿನಿಸ್ಟ್ ಮ್ಯಾನಿಪೆಷ್ಟೋ. ರಿಗಲ್ ಪ್ರಿಂಟ್ಸ್, ಬೆಂಗಳೂರು. ಪು.ಸಂ.2,3.
- ಕನಕ್ ಮುಖರ್ಜಿ. (2013). ಭಾರತೀಯ ಮಹಿಳಾ ವಿಮೋಚನೆಯ ಆಂದೋಲನ. ಲಡಾಯಿ ಪ್ರಕಾಶನ, ಪು.ಸಂ.101.
- ರಾಜಶೇಖರ.ಎಸ್. (2012). ಗ್ರಾಮೀಣ ಭಾರತ. ಭ್ರಮರ ಪ್ರಕಾಶನ, ಶಿವಮೊಗ್ಗ, ಪು.ಸಂ.286.
- ಪ್ರಶಾಂತ.ಎಚ್.ಡಿ. ಮತ್ತು ಎಸ್. ಜಯಂತ್ರಿ. (2017) ಮಹಿಳಾ ಸಬಲೀಕರಣವೆಂಬುದೇ ರಾಜಕಾರಣ ವಿಸ್ಮಯ ಪ್ರಕಾಶನ, ಮೈಸೂರು. ಪು.ಸಂ.55.
- ಶೈಲಜ ಹಿರೇಮಠ. (2010). ಮಹಿಳಾ ಅಧ್ಯಯನ. ಪ್ರಸಾರಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ. ಪು.ಸಂ.57.
- ಸುಜ್ಞಾನಮೂರ್ತಿ. ಬಿ. (2017). ಸಾಮಾಜಿಕ ಸಬಲೀಕರಣ. ಲಡಾಯಿ ಪ್ರಕಾಶನ, ಗದಗ. ಪು.ಸಂ.4–5.